ಓ.ಎಸ್ ನಂ. 14/2018 ಪಿ.ಡಬ್ಲೂಃ 1

ದಿನಾಂಕಃ 07.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ ಪಾಟೀಸವಾಲು ಶ್ರೀ. ಕೆ.ಕೆ.ಆರ್. ವಕೀಲರಿಂದ :-

ನಾನು ಈ ದಾವೆಯನ್ನು ಹಿಸ್ಸೆ ಕೋರಿ ದಾಖಲು ಮಾಡಿರುತ್ತೇನೆ ಎಂದರೆ ಹೌದು. ಈ ದಾವೆ ಸ್ವತ್ತನ್ನು ಒಳಗೊಂಡಂತೆ ನಾನು ಅಸಲು ದಾವಾ ಸಂಖ್ಯೆ 1/2016 ರಲ್ಲಿ ಹಕ್ಕು ಘೋಷಣೆಗಾಗಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿಯಲ್ಲಿ ಸೂಚಿಸಿರುವಂತೆ ಪೂರ್ವ ಪಶ್ಚಿಮ 29 ಅಡಿಗಳು ಉತ್ತರ ದಕ್ಷಿಣ 151 ಅಡಿ ವಿಸ್ತೀರ್ಣದ ಆರ್.ಸಿ.ಸಿ. ಕಟ್ಟಡದ ಪೂರ್ವಕ್ಕೆ ರಸ್ತೆ ಇರುತ್ತದೆ, ಶಾಲಾ ಆವರಣ ಇರುವುದಿಲ್ಲ. ಸಾಕ್ಷಿ ಮುಂದುವರೆದು ನೊಂದಣಿಯಾಗಿರುವ ದಾಖಲೆಯಲ್ಲಿ ಅದೇ ಚೆಕ್‌ಬಂಧಿ ಇರುವುದಾಗಿ ಉತ್ತರಿಸುತ್ತಾರೆ. ನಾನು ನೋಂದಣಿಯಾಗಿರುವ ದಾಖಲೆ ಹಾಗೂ ಈಗಿನ ವಾಸ್ತವಿಕತೆಯನ್ನು ಮನಗಂಡು ನಾನು ಚೆಕ್‌ಬಂಧಿಯನ್ನು ಹೇಳುತ್ತಿದ್ದೇನೆ. ಖಾತಾ ನಂಬರ್ 691 ರಿಂದ 696 ರ ಖಾತ ನಂಬರ್‌ಗಳು ಕಾಲೇಜು ಕಟ್ಟಡ ಹಾಗೂ ಹಾಸ್ಟೆಲ್ ಕಟ್ಟಡಗಳನ್ನು ಒಳಗೊಂಡಿರುತ್ತದೋ ಅಥವಾ ಹಾಸ್ಟೆಲ್ ಕಟ್ಟಡ ಮಾತ್ರ ಒಳಗೊಂಡಿರುತ್ತದೋ ಎಂದು ಕೇಳಲಾಗಿ ಸಾಕ್ಷಿಯು 4 ಗುಂಟೆ ಸ್ವತ್ತಿಗೆ ಖಾತಾ ನಂಬರ್‌ಗಳು ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ವಾದಪತ್ರದಲ್ಲಿ ನಮೂದಿಸಿರುವಂತಹ ಚೆಕ್‌ಬಂಧಿ ಒಳಗಡೆ ಭಾರತ್ ಯುನಿವರ್‌ಸೆಲ್ ಸೊಸೈಟಿಯ ಹಾಸ್ಟೆಲ್ ಕಟ್ಟಡ ಇರುತ್ತದೋ ಇಲ್ಲವೋ ಕೇಳಲಾಗಿ ಸಾಕ್ಷಿಯು ಈಗ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಮೊದಲು ಹಾಸ್ಟೆಲ್ ಕಟ್ಟಡ

ಇತ್ತು, ಈಗ ಇಲ್ಲ ಎಂದು ಉತ್ತರಿಸುತ್ತಾರೆ. ವಾದ ಪತ್ರದ ಚೆಕ್‌ಬಂಧಿ ಒಳಗಡೆಯಲ್ಲಿ ಹಾಸ್ಟೆಲ್ ಕಟ್ಟಡ ಹಾಗೂ ಕಾಲೇಜು ಕಟ್ಟಡ ಎರಡು ಇರುತ್ತದೆ.

ವಾದ ಪತ್ರದಲ್ಲಿ ನಮೂದಿಸಿರುವಂತೆ ಪಶ್ಚಿಮ ದಿಕ್ಕಿಗೆ ಭಾರತ್ ಯುನಿವರ್‌ಸೆಲ್ ಸೊಸೈಟಿಯ ಆಟದ ಮೈದಾನ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಖಾಲಿ ಬಾಬ್ತು ಜಮೀನು ಇರುವುದಾಗಿ ಉತ್ತರಿಸುತ್ತಾರೆ. ದಾವಾ ಸ್ವತ್ತಿನ ಉತ್ತರಕ್ಕೆ ನಂದೀಶ್ ಮತ್ತು ಇತರರಿಗೆ ಸೇರಿದಂತಹ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ. ರೇಣುಕಾರಾಧ್ಯರವರ ಬಾಬ್ತು ಜಮೀನು ಇರುತ್ತದೆ. ದಾವಾ ಸ್ವತ್ತಿನ ದಕ್ಷಿಣಕ್ಕೆ ಹಾಸ್ಟೆಲ್‌ಗೆ ಹಾಗೂ ಮೈದಾನಕ್ಕೆ ಓಡಾಡುವಂತಹ ದಾರಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಖಾಲಿ ಜಾಗಕ್ಕೆ ಹೋಗಲು ದಾರಿ ಇರುವುದಾಗಿ ಉತ್ತರಿಸುತ್ತಾರೆ. ನಾನು ಭಾರತ್ ಯುನಿವರ್‌ಸೆಲ್ ಎಜುಕೇಷನ್ ಸೊಸೈಟಿಯ ಕಾರ್ಯಕಾರಿಣಿ ಮಂಡಳಿಯ ಸದಸ್ಯೆಯಾಗಿ ನೇಮಕಗೊಂಡಾಗ ಸರ್ಕಾರಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸಿ ಕಾರ್ಯಕಾರಿಣಿ ಮಂಡಳಿಗೆ ಸದಸ್ಯೆನಾಗಿರುತ್ತೇನೆ ಎಂದರೆ ಸಾಕ್ಷಿಯು ಪ್ರಮಾಣ ಪತ್ರ ನೀಡಿರುವುದು ನೆನಪಿರಿವುದಿಲ್ಲ, ಆದರೆ ಸರ್ಕಾರದ ಅನುಮತಿ ಪಡೆದಿರುವುದಾಗಿ ಉತ್ತರಿಸುತ್ತಾರೆ. ಕಾರ್ಯಕಾರಿಣಿ ಸದಸ್ಯೆಯಾಗಿ ನೇಮಕಗೊಂಡಾಗ ನಾನು ಯಾವುದೇ ಪ್ರತಿಫಲವನ್ನು ಪಡೆಯದೇ ಕೆಲಸ ನಿರ್ವಹಿಸುವುದಾಗಿ ನಾನು ಹೇಳಿದ್ದೆ ಎಂದರೆ ಹೌದು.

ನಾನು ಕಾರ್ಯಕಾರಿಣಿ ಸದಸ್ಯೆಯಾದಾಗ ಅಂದಾಜು 34 ಸಭೆಗಳಲ್ಲಿ ಭಾಗವಹಿಸಿ ಸಹಿ ನಡವಳಿಕೆಗಳಿಗೆ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಸಹಿ ಮಾಡಿರುವುದು ನಿಜ, ಆದರೆ ಎಲ್ಲಾ ಸಭೆಗಳಿಗೆ ಹಾಜರಾಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಭೆಯಲ್ಲಿ ನಡೆದಂತಹ ನಡವಳಿಕೆಗಳನ್ನು ಅನುಮೋದಿಸಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಕೆಲವು

ಸಭೆಗಳ ವಿಚಾರಗಳನ್ನು ತಿಳಿಸದೇ ನಮ್ಮ ಬಳಿ ಸಹಿ ಪಡೆದಿರುವುದಾಗಿ ಉತ್ತರಿಸುತ್ತಾರೆ. ನಾನು ಕಾರ್ಯಕಾರಿಣಿ ಸದಸ್ಯೆಯಾಗಿ ಇದ್ದಾಗ ನಡೆದಂತಹ ಸಭೆಗಳು ಕಾನೂನುಬಾಹಿರವಾಗಿ ನಡೆದಂತಹ ಸಭೆಗಳಾಗಿರುತ್ತದೆ. ನಾನು ಪದವಿಧರೆ ಎಂದರೆ ಹೌದು. ಹಾಗೂ ಸರ್ಕಾರಿ ಸೇವೆಯಲ್ಲಿ ಶಿಕ್ಷಕ ವೃತ್ತಿಯನ್ನು ಮಾಡುತ್ತಿದ್ದೆ ಎಂದರೆ ಹೌದು. ಶಿಕ್ಷಕ ವೃತ್ತಿಯನ್ನು ಮಾಡುತ್ತಿದ್ದು, ಪ್ರಜ್ಞೆಯನ್ನು ಹೊಂದಿರುವಂತಹ ವ್ಯಕ್ತಿ ಎಂದರೆ ಹೌದು. ಕಾರ್ಯಕಾರಿಣಿ ಸದಸ್ಯೆ ಇದ್ದಾಗ ಭಾರತ್ ಯುನಿವರ್‌ಸೆಲ್ ಎಜುಕೇಷನ್ ಸೊಸೈಟಿ ರವರು ಮಾಡಿದಂತಹ ಸಭೆಗಳ ಬಗ್ಗೆ ನಾನು ಯಾವುದೇ ಪ್ರಶ್ನೆ ಮಾಡಿರುವದಿಲ್ಲ. ಸಾಕ್ಷಿ ಮುಂದುವರೆದು ಯಾವುದೇ ಸಭೆಗಳನ್ನು ಮಾಡುತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ನಾನು ಸರ್ಕಾರದಿಂದ ಅನುಮತಿಯನ್ನು ಪಡೆದಾಗ ಭಾರತ್ ಯುನಿವರ್‌ಸೆಲ್ ಎಜುಕೇಷನ್ ಸೊಸೈಟಿಯಲ್ಲಿ ಪ್ರತಿಫಲಾಪೇಕ್ಷೆಯನ್ನು ಪಡೆಯದೇ ಪ್ರಮಾಣಿಕವಾಗಿ ಕರ್ತವ್ಯ ನಿರ್ವಹಿಸುತ್ತೇನೆಂದು ಅನುಮತಿ ಪಡೆದಿದ್ದೆ ಎಂದರೆ ಸಾಕ್ಷಿಯು ಪ್ರತಿಫಲಾಪೇಕ್ಷೆಯನ್ನು ಪಡೆಯದೇ ಕರ್ತವ್ಯ ನಿರ್ವಹಿಸುವುದಾಗಿ ನಾನು ಅನುಮತಿಯನ್ನು ಪಡೆದಿದ್ದು, ಬೇರೆ ಯಾವುದೇ ನಿಭಂಧನೆ ಇರುವುದಿಲ್ಲ ಎಂದು ಉತ್ತರಿಸುತ್ತಾರೆ.

ಭಾರತ್ ಯುನಿವರ್‌ಸೆಲ್ ಎಜುಕೇಷನ್ ಸೊಸೈಟಿ ಶಿಕ್ಷಕರ ತರಬೇತಿ ಸಂಸ್ಥೆಯ ಹಾಸ್ಟೆಲ್ ಕಟ್ಟಡ ಅಭಿವೃದ್ದಿಗಾಗಿ ನಾನು ಕಾರ್ಯಕಾರಿಣಿ ಸದಸ್ಯೆ ಇದ್ದಾಗ ನಾನು ಸಹಾ ಸಹಿ ಮಾಡಿ ಎಸ್.ಬಿ.ಐ. ಹೊಳೆನರಸೀಪುರದಿಂದ ಸಾಲ ಪಡೆದಿದ್ದೆ ಎಂದರೆ ಹೌದು. ಸಾಕ್ಷಿ ಮುಂದುವರೆದು ಕಟ್ಟಡದ ಅಭಿವೃದ್ದಿಗಾಗಿ ಸಾಲ ಪಡೆದಿದ್ದು, ಹಾಸ್ಟೆಲ್ ಕಟ್ಟಡ ಎಂದು ನನಗೆ ಗೊತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ನಾನು ಕಾರ್ಯಕಾರಿಣಿ ಸದಸ್ಯೆಯಾಗಿ ಇದ್ದಾಗ ಹಾಗೂ ಎಸ್.ಬಿ.ಐ. ಹೊಳೆನರಸೀಪುರದಿಂದ ಸಾಲ ಪಡೆದಾಗ ಭಾರತ್ ಯುನಿವರ್‌ಸೆಲ್

ಎಜುಕೇಷನ್ ಸೊಸೈಟಿಯ ಪರವಾಗಿ ಹಿರಿಯ ವಕೀಲರಾದಂತಹ ಶ್ರೀ. ಆರ್.ಡಿ. ರವೀಶ್ ರವರು ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಯ ಪರವಾಗಿ ಬ್ಯಾಂಕಿಗೆ ಕಾನೂನು ಸಲಹೆಯನ್ನು ನೀಡಿದ್ದರು ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಬ್ಯಾಂಕಿನಿಂದ ಸಾಲವನ್ನು ಪಡೆದು ದಾವಾ ಅನುಸೂಚಿ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಹಾಸ್ಟೆಲ್ ಕಟ್ಟಡವನ್ನು ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ಗಂಡ ಮಂಜುನಾಥ ಮೃತಪಟ್ಟ ನಂತರ ನಾನು ಕಾರ್ಯಕಾರಿಣಿ ಮಂಡಳಿ ಸದಸ್ಯೆಯಾಗಿ ನೇಮಕಗೊಂಡಿದ್ದೆ ಎಂದರೆ ಹೌದು. ನಾನು ಕಾರ್ಯಕಾರಿಣಿ ಮಂಡಳಿ ಸದಸ್ಯೆಯಾಗಿ ನೇಮಕಗೊಂಡ ನಂತರ ನನ್ನ ಗಂಡ ಕೆ.ವಿ. ಮಂಜುನಾಥ್ ರವರ ನೆನಪಿಗಾಗಿ ಒಂದು ಬಯಲು ರಂಗ ಮಂದಿರವನ್ನು ನಿರ್ಮಾಣ ಮಾಡಿರುವುದು ನನಗೆ ಈಗ ನೆನಪಿಲ್ಲ. ನನ್ನ ಗಂಡ ಮಂಜುನಾಥ್ ರವರ ನೆನಪಿಗಾಗಿ ಮಂಜುಶ್ರೀ ಸ್ಮರಣಾರ್ಥ ವೇದಿಕೆಯನ್ನು ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕ : 11.03.2007 ರ ದಿನಾಂಕಕ್ಕೆ ದಾವಾ ಸ್ವತ್ತಿನ ಖಾತೆಗಳು ಯಾರ ಹೆಸರಿನಲ್ಲಿತ್ತು ಎಂದು ತಮಗೆ ಗೊತ್ತಿದೆಯಾ ಎಂದು ಕೇಳಲಾಗಿ ಸಾಕ್ಷಿಯು ಮಂಜುನಾಥ್ ಹಾಗೂ ಕೆ.ವಿ. ಶಂಭುಲಿಂಗಪ್ಪನವರ ಹೆಸರಿನಲ್ಲಿ ಇತ್ತು ಎಂದು ಉತ್ತರಿಸುತ್ತಾರೆ. ಆ ಸಂಧರ್ಭದಲ್ಲಿ ಕೆ.ವಿ. ಮಂಜುನಾಥ್ ಅಧೀಕ್ಷಕರು ಹಾಗೂ ಪ್ರಾಂಶುಪಾಲರಾಗಿದ್ದು, ನನ್ನ ಭಾವ ಶಂಭುಲಿಂಗಪ್ಪ ಕಾರ್ಯದರ್ಶಿಯಾಗಿದ್ದರು ಎಂದರೆ ಹೌದು. 2007 ನೇ ಸಾಲಿನವರೆಗೆ ಖಾತೆಗಳು ಅಧೀಕ್ಷಕರಾದ ಮಂಜುನಾಥ್ ಹಾಗೂ ಕಾರ್ಯದರ್ಶಿಯವರಾದ ಶಂಭುಲಿಂಗಪ್ಪನವರ ಹೆಸರಿನಲ್ಲಿ ಮುಂದುವರೆದುಕೊಂಡು ಬಂತು ಎಂದರೆ ಹೌದು. ಎರಡು ಹೆಸರುಗಳು ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಯನ್ನು ಪ್ರತಿನಿಧಿಸುವಂತಹ ವ್ಯಕ್ತಿಗಳಾಗಿದ್ದರು ಎಂದರೆ ಸರಿಯಲ್ಲ.

ದಿನಾಂಕ : 11.03.2007 ರ ಸಭೆಯಲ್ಲಿ ಕೆ.ವಿ. ಮಂಜುನಾಥ್ ರವರ ಹೆಸರನ್ನು ದಾಖಲೆಗಳಲ್ಲಿ ಕೈ ಬಿಡಲು ಒಂದು ಗೊತ್ತುವಳಿಯನ್ನು ಅಂಗೀಕರಿಸಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ